# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(3)ಪಿಆರ್/101/18–19

ಆಯುಕ್ತರವರ ಕಛೇರಿ,
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 02-03-2020.

## ಸುತ್ತೋಲೆ

**ವಿಷಯ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಾರ್ವಜನಿಕ ಸಂಪರ್ಕಾಧಿಕಾರಿ ಕಛೇರಿಗೆ ಸಹಾಯಕ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಯನ್ನು ಪಾಲಿಕೆ ಸೇವೆಯಲ್ಲಿರುವ(Inservice) ಅರ್ಹ ಅಧಿಕಾರಿ/ಸಿಬ್ಬಂದಿಗಳಿಂದ ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ: UDD/141/MLR/2006. ದಿ: 09–03–2007.
2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 75 ಸೇನೆನಿ 2010, ದಿ: 19–05–2010
3) ಸಾರ್ವಜನಿಕ ಸಂಪರ್ಕಾಧಿಕಾರಿರವರ ವರದಿ ಸಂಖ್ಯೆ: PRO/GL/4311/12-13, ದಿ: 14-03-13
4) ಕಾನೂನು ಸಭೆಯ ವಿಷಯದ ಸಂಖ್ಯೆ: BBMP/LC/RR/2536/13-14,4-03-14
5) ಕೌನ್ಸಿಲ್ ಸಭೆಯ ವಿಷಯದ ಸಂಖ್ಯೆ: 15/2014–15, ದಿ: 28–05–2014
6) ಆಯುಕ್ತರ ಕಛೇರಿ ಪತ್ರ ಸಂಖ್ಯೆ: ಬಿ12(3)/ಪಿಆರ್/03/2013–14, ದಿ: 12–08–2014.

* * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾರ್ವಜನಿಕ ಸಂಪರ್ಕಾಧಿಕಾರಿಯ ಕಛೇರಿಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಉಲ್ಲೇಖ(5)ರ ಕೌನ್ಸಿಲ್ ಸಭೆಯ ನಿರ್ಣಯದಂತೆ ಸಹಾಯಕ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಯನ್ನು ಜರೂರಾಗಿ ಪಾಲಿಕೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಅಧಿಕಾರಿ/ಸಿಬ್ಬಂದಿಗಳಿಂದ ಈ ಕೆಳಕಂಡ ವಿಧಾನವನ್ನು ಅಳವಡಿಸಿಕೊಂಡು ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಭರ್ತಿ ಮಾಡಲು ಉದ್ದೇಶಿಸಲಾಗಿದೆ.

| Sl. No | CATEGORY OF POST & PAY SCALE | No of Posts | METHOD OF RECRUITMENT | MINIMUM QUALIFICATION | Authority competent to appoint |
|---|---|---|---|---|---|
| 1. | Assistant Public Relation Officer (pay scale 43100-83900) | 05 | By Promotion/by Selection from the Class 'B' official in relevant dept. or if no officials available in Class 'B' then by selection from the lower cadre post in relevant dept. or if no qualified officials is available in BBMP then of equivalent cadre officer from by deputation Information dept, GOK | 1. Master Degree in Journalism & Mass Communication /Public Relation of a recognized University/ Institution or equivalent.<br>2. A minimum for 5 years Service in class 'B' or lower cadre post.<br>3. Prescribed test as detailed in annexure-1 (KMC Manual). | By the Corporation under Section 89 of the Karnataka Municipal Corporation Act 1976. |

. . . 2.

Office Of I T Advisor No. 823 Date 2-3-2020 Mahanagara Palike

03/03/2020 IT-Coordinator

ಈ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಬಟವಾಡೆ ಅಧಿಕಾರಿಗಳು ತಮ್ಮ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಸಹಾಯಕ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ಮೇಲ್ಕಂಡಂತೆ ವಿದ್ಯಾರ್ಹತೆ/ಅನುಭವ ಹಾಗೂ ಆಸಕ್ತಿಹೊಂದಿರುವಂತಹ, ಸದರಿ ಅಧಿಕಾರಿ/ಸಿಬ್ಬಂದಿಗಳ ಸೇವಾ ವಿವರಗಳೊಂದಿಗೆ ಮೇಲ್ಕಂಡಂತೆ ಎಲ್ಲಾ ಮೂಲ ದಾಖಲಾತಿಗಳನ್ನು ಸಮುಚಿತ ಮಾರ್ಗದಲ್ಲಿ ಈ ಸುತ್ತೋಲೆ ಹೊರಡಿಸಿದ ದಿನದಿಂದ 10 ದಿನಗಳೊಳಗಾಗಿ, ಈ ಕೆಳ ಸಹಿದಾರರ ಕಛೇರಿಗೆ ಸಲ್ಲಿಸಲು ಸೂಚಿಸಿದೆ. ನಂತರ ಬಂದಂತಹ ಅರ್ಜಿಗಳನ್ನು ಪರಿಗಣಿಸದೇ ಮುಂದಿನ ಸೂಕ್ತ ಕ್ರಮವಹಿಸಲಾಗುವುದು.

ಮಾನ್ಯ ಆಯುಕ್ತರ ಆದೇಶದ ಮೇರೆಗೆ)

ಅಪರ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಪ್ರತಿಯನ್ನು :**

: ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿರವರಿಗೆ ಕಳುಹಿಸಿದೆ.

: ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿರವರಿಗೆ ಕಳುಹಿಸಿದೆ.

: ವಿಶೇಷ ಆಯುಕ್ತರು(ಯೋಜನೆ)ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.

: ಅಪರ ಆಯುಕ್ತರು(ಆಡಳಿತ)(ಹಣಕಾಸು)(ಕಲ್ಯಾಣ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.

: ಕೌನ್ಸಿಲ್ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡಲು ಕೋರಿದೆ.

: ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರವರುಗಳಿಗೆ ಕಳುಹಿಸಿದೆ.

: ಕಾನೂನು ಕೋಶದ ಮುಖ್ಯಸ್ಥರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.

: ಮುಖ್ಯ ಲೆಕ್ಕಾಧಿಕಾರಿ/ಮುಖ್ಯ ಲೆಕ್ಕಪರಿಶೋಧಕರು ರವರ ಮಾಹಿತಿಗಾಗಿ ಕಳುಹಿಸಿದೆ.

: ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕಳುಹಿಸುತ್ತಾ ಅರ್ಹ ಅಧಿಕಾರಿ/ಸಿಬ್ಬಂದಿಗಳ ಸೇವಾ ವಿವರಗಳೊಂದಿಗೆ ಹಾಗೂ ಎಲ್ಲಾ ಮೂಲ ದಾಖಲೆಗಳೊಂದಿಗೆ ಸುಮುಚಿತ ಮಾರ್ಗದಲ್ಲಿ ಆಯುಕ್ತರ ಕಛೇರಿಯ ಆಡಳಿತ ಶಾಖೆಗೆ ತಪ್ಪದೇ ಕಳುಹಿಸಿಕೊಡಲು ಸೂಚಿಸಿದೆ.

: ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತಾ ಅಗತ್ಯ ಸೂಕ್ತ ಕ್ರಮವಹಿಸಲು ಕೋರಿದೆ.

: ಕಛೇರಿ ಪ್ರತಿ.

**Note:** ಎಲ್ಲಾ ಬಟವಾಡೆ ಅಧಿಕಾರಿಗಳು ಸುತ್ತೋಲೆಯನ್ನು ಪ್ರಚಾರ ಪಡಿಸಿ ಮಾಹಿತಿಯನ್ನು ದಿನಾಂಕ: 11-03-2020 ರೊಳಗೆ ತಪ್ಪದೇ ಮೂಲ ದಾಖಲಾತಿಗಳೊಂದಿಗೆ ಕಳುಹಿಸುವುದು.